ವಾಸ ಊಟ' ಎಂದು ಕೈಹಿಡಿದು ಕರೆತಂದಿದ್ದರು ಭಾವೇಶ್. ಜನರ ಸೇವೆಯೇ ಜನಾರ್ದನನ ಸೇವೆ ಎಂದು ಬಗೆದಿದ್ದರು. ಇಂದು ಈ ಸಜ್ಜನ ಅವರಿಂದ ಒಂದು ಧನ್ಯವಾದವನ್ನೂ ಬಯಸದೆ ಅವರಿಗೆ ಜಗನ್ನಾಥನ ಸ್ಪರ್ಶ ಮಾಡಿಸಿ ನಡೆದುಬಿಟ್ಟಿದ್ದ. ಆ ವ್ಯಕ್ತಿಯ ನಿಸ್ವಾರ್ಥದ ಈ ಕಾರ್ಯ ಭಾವೇಶ್ ಮತ್ತು ನೀತಾರವರ ಮನಸ್ಸನ್ನು ಮುದಗೊಳಿಸಿತು. ಕಣ್ಣಿಗೆ ಚಿಕಿತ್ಸೆ ಇಲ್ಲ ಎಂಬ ನಿರಾಸೆಯನ್ನು ಬದಿಗಿಟ್ಟು ಹಿಂತಿರುಗಿದರು.

* * *

ಒಂದು ದಿನ ಮುಂಜಾನೆಯೇ ಭಾವೇಶ್ ಅವರಿಗೆ ಭಾವಸಾ ಅವರ ಫೋನ್ ಬಂದಿತು. ನನಗೆ ನಿಮ್ಮೊಡನೆ ಒಂದು ಮುಖ್ಯ ವಿಷಯ ಮಾತನಾಡಬೇಕಿದೆ ಎಂದರು. ಭಾವೇಶ್, ''ಹೇಳಿ ಭಾವಸಾ, ಏನು ಹೇಳಲು ಬಯಸುತ್ತೀರಿ?' ಎಂದು ಕೇಳಿದರು. ಅವರು ಹೇಳಿದರು 'ನನ್ನ ಡ್ರೈವರ್ ಶಾಂತಾರಾಮ್ ಒಂದು ಪ್ರಸ್ತಾವ ತಂದಿದ್ದಾನೆ. ಮಹಾಬಲೇಶ್ವರದಲ್ಲಿ ನನ್ನ ಬಂಗಲೆ ಇದೆಯಲ್ಲ, ಅದರ ಎದುರು ನಾಲ್ಕು ಕಿಲೋಮೀಟರ್ ದೂರದಲ್ಲಿ ಸತಾರಾ ರಸ್ತೆಯಲ್ಲಿ ಮೋರೇಶ್ವರ್ ಎಂಬ ಹಳ್ಳಿ ಇದೆ. ಬಹಳ ಸುಂದರವಾದ ಜಾಗ. ಸಿನಿಮಾ ಅಭಿನೇತ್ರಿ ಜಾಕಿ ಶ್ರಾಫ್ ಅವರ ಬಂಗಲೆ ಕೂಡಾ ಅಲ್ಲೇ ಇರುವುದು. ಅದೇ ರಸ್ತೆ ಮುಂದೆ ಕಾಸ್ ಪಠಾರ್‌ಗೂ ಹೋಗುತ್ತದೆ. ಅಲ್ಲಿ ಅರ್ಧ ಎಕರೆ ಜಾಗ ಮಾರಾಟಕ್ಕಿದೆ. ನನಗೆ ಗೊತ್ತು, ಇಷ್ಟು ದೊಡ್ಡ ಜಾಗವನ್ನು ಕೊಳ್ಳುವುದು ಕಷ್ಟದ ವಿಷಯ. ಆದರೆ ನನ್ನ ಇಬ್ಬರು ಸ್ನೇಹಿತರಿದ್ದಾರೆ. ರತ್ನಪಾರಖೀ, ವಾಸ್ತುಶಿಲ್ಪಿಗಳು (ಆರ್ಕಿಟೆಕ್ಟ್). ಇನ್ನೊಬ್ಬರು ಗಂಗಾರಾಮ್‌ಜೀ ಪಟೇಲ್, ಅವರು ಕನ್ಸಸ್ಟ್ರಕ್ಷನ್ ಕಂಪನಿ ಇರುವವರು. ಇವರಿಬ್ಬರಿಗೂ ಮಹಾಬಲೇಶ್ವರದಲ್ಲಿ ಒಂದು ಸಣ್ಣ ಮನೆ ಮಾಡುವ ಇಚ್ಛೆ ಇದೆ. ಈ ಅರ್ಧ ಎಕರೆ ಜಾಗವನ್ನು ಮೂರು ಭಾಗವಾಗಿ ಮಾಡಿ ಇದನ್ನು ಕೊಂಡುಕೊಂಡರೆ, ನಿನ್ನ ಮೋಂಬತ್ತಿ ಕಾರ್ಖಾನೆಯ ಕೆಲಸ ಮುಂದೆ ಸಾಗುತ್ತದೆ' ಎಂದರು.

ಭಾವಸಾ ಅದೇ ದಿನ ಮಧ್ಯಾಹ್ನ ಆ ಜಾಗವನ್ನು ನೋಡುವ ವ್ಯವಸ್ಥೆ ಮಾಡಿಸಿದರು. ಭಾವೇಶ್, ನೀತಾ ಮತ್ತು ಭಾವಸಾ ಅವರಿಗೆ ಜಾಗ ಇಷ್ಟವಾಯಿತು. ಕಾರಣ ಆ ಇಡೀ ಜಾಗ, ನಾಲ್ಕೂ ಕಡೆಯೂ ದೊಡ್ಡ ದೊಡ್ಡ ಬೆಟ್ಟಗಳಿಂದ ಹಸಿರು ವೃಕ್ಷಗಳಿಂದ ಆವೃತವಾಗಿತ್ತು. ಆ ಮರಗಳಿಂದ ಕೇಳಿ ಬರುತ್ತಿದ್ದ ಹಕ್ಕಿಗಳ ಕಲರವ ಎಲ್ಲರ ಮನಸೂರೆಗೊಂಡಿತ್ತು. ಶಾಂತಾರಾಮ್ ಹೇಳಿದರು, ಎದುರಿಗೆ ದೂರದಲ್ಲಿ ಪೂರ್ವ ದಿಕ್ಕಿನ ನೀಲಿ ಪರ್ವತಗಳಲ್ಲಿ ಬಹಳ ಸುಂದರವಾದ ಸೂರ್ಯೋದಯ ಕಾಣಿಸುವುದು. ಗಂಗಾರಾಮ್ ಪಾಟೀಲ್ ಮತ್ತು ರತ್ನಪಾರಖೀ ಅವರುಗಳು ಕೂಡಾ ಜೊತೆಗೆ ಬಂದಿದ್ದರು. ಅವರಿಗೂ ಜಾಗ ಹಿಡಿಸಿತು. ಆ ಜಾಗದ ಎಲ್ಲ ಕಾಗದ ಪತ್ರಗಳನ್ನು ಪರಿಶೀಲಿಸಿ, ಖರೀದಿ ಮಾಡಲು ಮುನ್ನಡೆಯುವುದೆಂದು ಅದೇ ದಿನ ನಿರ್ಧಾರ ತೆಗೆದುಕೊಂಡರು.

ಸುಮಾರು 21,000 ಚದರ ಅಡಿಯ ಜಾಗವನ್ನು 7000 ಚದರ ಅಡಿಯ ಮೂರು ಭಾಗಗಳನ್ನಾಗಿ ಮಾಡಿ ಹಂಚಿಕೊಳ್ಳುವುದೆಂದು ನಿರ್ಧಾರವಾಯಿತು. ಅದರ ಬೆಲೆ ಕೇಳಿದಾಗ, 1000 ಚದರ ಅಡಿಯ ಬೆಲೆ ಒಂದು ಲಕ್ಷ ರೂಪಾಯಿ ಎಂದು ಮಾರಾಟ ಮಾಡಲಿರುವಾತ ತಿಳಿಸಿದ.

ಈ ಬಗೆಯಲ್ಲಿ 21 ಲಕ್ಷ ಆ ಜಾಗದ ಬೆಲೆಯಾಗಿತ್ತು. ಕೊನೆಗೆ ಅದನ್ನು 16.5 ಲಕ್ಷಕ್ಕೆ ಇಳಿಸಿ ಮಾತುಕತೆ ಮುಗಿಸಿದರು. ಈಗ ಆ ಮೊತ್ತವನ್ನು ಮೂರು ಭಾಗವಾಗಿ ವಿಭಾಗಿಸಬೇಕಿತ್ತು. ಭಾವೇಶ್ ತಮಗೆ 5.5 ಲಕ್ಷ ರೂಪಾಯಿ ಜೋಡಿಸುವುದು ಕಷ್ಟವಿದೆ ಎಂದು ಹೇಳುವುದು ಹೇಗೆಂದು ತೋರದೆ ಕ್ಷಣ ಮೌನವಿದ್ದರು. ಅಲ್ಲಿಯವರೆಗಿನ ಪರಿಸ್ಥಿತಿ ಹೇಗಿತ್ತು ಎಂದರೆ ಸನ್‌ರೈಸ್ ಕ್ಯಾಂಡಲ್ಸ್ ಏನನ್ನು ಗಳಿಸುತ್ತಿತ್ತೋ, ಅದರ ಪೂರಾ ಹಣ ಭಾವೇಶ್ ಅವರ ಅಂಧ ಮಿತ್ರರ ವಾಸ, ಊಟ, ಸಂಬಳ ಮತ್ತು ಕಮಿಷನ್ ಮೇಲೆ ಖರ್ಚಾಗುತ್ತಿತ್ತು. ಅವರ ಕೈಗೆ ಕೆಲಸ ಹೆಚ್ಚು ಹೆಚ್ಚು ಬರುತ್ತಿತ್ತು, ಆದರೆ ಅದೇ ಅನುಪಾತದಲ್ಲಿ ಸನ್‌ರೈಸ್ ತಂಡ ಕೂಡಾ ಹಿಗ್ಗುತ್ತಿತ್ತು. ಒಂದು ಕಡೆ ಮನಸ್ಸು ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡೇ ಮುಂದುವರೆಯಬೇಕು ಎಂದರೆ ಜಾಗದ ಅಗತ್ಯ ಬೀಳಲಿದೆ. ಎಲ್ಲಿಯವರೆಗೆ ಬಾಡಿಗೆ ಜಾಗದಲ್ಲಿ ಕೆಲಸ ಮಾಡುತ್ತಿರುವುದು? ಎಂದಿತ್ತು. ಆದರೆ ಇನ್ನೊಂದು ಮನಸ್ಸು ಇಷ್ಟು ಹಣವನ್ನು ಹೊಂದಿಸುವುದು ಹೇಗೆ? ಎಂದು ಯೋಚಿಸಿತ್ತು. ಹೇಳದೆಯೇ ಭಾವಸಾ ಇವರ ಮನಸ್ಸನ್ನು ಓದಿರಬೇಕು. ಒಂದು ದಿನ ಅವರೊಂದು ಮೀಟಿಂಗ್ ಕರೆದರು. ಆ ದಿನ ಎಲ್ಲದರ ನಿಷ್ಕರ್ಷೆ ಆಗಬೇಕಿತ್ತು. ಗಂಗಾರಾಮ್ ಮತ್ತು ರತ್ನಪಾರಖೀ ಅವರು ಹೇಳಿದರು: '16.5 ಲಕ್ಷದ ಲೆಕ್ಕದಲ್ಲಿ ನಾವು ಒಬ್ಬೊಬ್ಬರೂ 5.5 ಲಕ್ಷ ನೀಡಬೇಕು. ಈ ಜಾಗ ನಮಗೆಷ್ಟು ಇಷ್ಟವಾಗಿದೆ ಎಂದರೆ, 1000 ಚದರಡಿಗೆ ಅವರು 1.5 ಲಕ್ಷ ಕೇಳಿದ್ದರು ನಾವು ಖುಷಿಯಿಂದಲೇ ಕೊಟ್ಟು ಬಿಡುತ್ತಿದ್ದೆವು. ನಮಗೆ 21 ಲಕ್ಷದ ಮೊತ್ತ ಕೂಡಾ ಒಪ್ಪಿಗೆ ಇತ್ತು. ಈಗ ಆದ ಒಪ್ಪಂದ ನಮಗೆ ಲಾಭವನ್ನೇ ತಂದುಕೊಟ್ಟಿದೆ. ಆ ಲಾಭವನ್ನು ನಾವು ಭಾವೇಶ್ ಅವರಿಗೆ ಬಿಟ್ಟುಕೊಡೋಣ. ಆ ಲೆಕ್ಕದಲ್ಲಿ ನಾವು ಇಬ್ಬರೂ ಏಳುವರೆ ಲಕ್ಷ ಹಾಕೋಣ, ಭಾವೇಶ್ 2.5 ಲಕ್ಷ ಹಾಕಲಿ' ಎಂದರು.

ಭಾವೇಶ್ ಹೀಗೆ ಕೂಡಾ ಆಗಬಹುದು ಎಂದು ಕನಸಿನಲ್ಲಿಯೂ ನೆನೆಸಿರಲಿಲ್ಲ. ಇದೊಂದು ಚಮತ್ಕಾರವಾಗಿ ಕಂಡಿತ್ತು. ಪವಾಡಗಳು ನಮ್ಮ ಬದುಕಿನಲ್ಲಿ ಆಗುತ್ತವೆ, ಅವು ಯಾವುದೋ ಗೊತ್ತಿಲ್ಲದ ಶಕ್ತಿಯಿಂದಲ್ಲ; ನಮ್ಮ ಶ್ರದ್ಧೆ, ಪರಿಶ್ರಮ, ಸ್ನೇಹ ಇಂತಹ ಚಮತ್ಕಾರಗಳು ನಮ್ಮ ಬದುಕಿನಲ್ಲಿ ಘಟಿಸುವಂತೆ ಮಾಡುತ್ತವೆ. ಅದೃಷ್ಟವನ್ನು ಆಕರ್ಷಿಸುತ್ತವೆ.

ಭಾವಸಾ, ಗಂಗಾರಾಮ್ ಮತ್ತು ರತ್ನಪಾರಖೀ ಅವರು ಇದೆಲ್ಲವನ್ನೂ ಮೊದಲೇ ನಿರ್ಧರಿಸಿ ಬಂದ ಹಾಗೆ ಭಾವೇಶ್ ಅವರಿಗೆ ಅನಿಸಿತ್ತು. ಅವರ ಉದಾರತೆಗೆ ಭಾವೇಶ್ ಆಭಾರಿಯಾಗಿದ್ದರು. ಆ ದಿನಗಳಲ್ಲಿ 2.5 ಲಕ್ಷವನ್ನು ಕೂಡಿಸುವುದೂ ಭಾವೇಶ್ ಅವರಿಗೆ ಸುಲಭವಿರಲಿಲ್ಲ. ತಮ್ಮ ಬಳಿ ಇದ್ದ ಉಳಿತಾಯವನ್ನು, ಕೆಲವು ಗೆಳೆಯರಿಂದ ಸಾಲವನ್ನು ತೆಗೆದುಕೊಂಡು 2.5 ಲಕ್ಷ ರೂಪಾಯಿ ಕೂಡಿಸಿ ಭಾವಸಾ ಅವರಿಗೆ ತಲುಪಿಸಿದರು. ಅಲ್ಲಿಂದ ಮುಂದೆ ಕೊಂಚ ಸಮಯದಲ್ಲಿಯೇ ಅಗ್ರಿಮೆಂಟ್ ತಯಾರಾಯಿತು. 16.5 ಲಕ್ಷ ಮೊತ್ತವನ್ನು ಕೊಟ್ಟು 21000 ಚದರಡಿ ಜಾಗ ಇವರದಾಯಿತು. ಜಾಗ ಖರೀದಿ ಆದ ಕೆಲವೇ ದಿನಗಳ ನಂತರ ರತ್ನಪಾರಖೀ ಅವರು ಅಮೆರಿಕಗೆ ಹೊರಟು ಹೋದರು. ಅಲ್ಲಿ ಅವರ ಆರೋಗ್ಯ ಕೆಟ್ಟಿತು. ಅವರ ಮಾತಿನಂತೆ, ಗಂಗಾರಾಮ್ ಪಾಟೀಲ್ ಅವರ ದೊಡ್ಡ ಮಗ ಸುಹಾಸ್ ಅವರು ರತ್ನಪಾರಖೀ ಅವರ ಭಾಗದ ಜಾಗವನ್ನು ತಾವು ಖರೀದಿಸಿದರು.

ಈಗ ಕೊಂಡ ಜಾಗದಲ್ಲಿ ನಿರ್ಮಾಣ ಕಾರ್ಯ ಆರಂಭವಾಗಬೇಕಿತ್ತು. ಜಾಗವನ್ನೇನೋ ಇವರು



ಭಾವೇಶ್‌ರ ಜನಪ್ರಿಯತೆ
ಹೆಚ್ಚಿಸಿದ ಅಮೀರ್‌ಖಾನ್‌ರ
'ಸತ್ಯಮೇವ ಜಯತೇ'